ಅಸಲು ದಾವೆ ನಂ. 15/2021

ಪಿ.ಡಬ್ಲೂ೩ 2- ಎಂ. ಮಗೇಂದ್ರನ್ ಬಿನ್ ಮುರುಗೇಶ್

ದಿನಾಂಕಃ 04/12/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಎಸ್. ಎಸ್. ವಕೀಲರಿಂದ**

ನಾನು ಈ ದಾವೆಯಲ್ಲಿ ಸಾಕ್ಷಿದಾರನಾಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ವಾದಿಯ ತಾಯಿಯಾದ ಕಮಲಮ್ಮ ಕೋಂ ಟಿ. ನಾರಾಯಣಮೂರ್ತಿ ರವರು ದಿನಾಂಕ 07.02.2003 ರಂದು ವಾದಿ ಹಾಗೂ ಅವರ ಸಹೋದರರಾದ ಮಂಜುನಾಥ ಟಿ.ಎನ್ ರವರ ಹೆಸರಿಗೆ ಬರೆದುಕೊಟ್ಟ ವಿಲ್ ಆಗಿರುತ್ತದೆ. ಸದರಿ ದಾಖಲೆಯನ್ನು ನಾನೇ ಕಮಲಮ್ಮ ಕೋಂ ಟಿ. ನಾರಾಯಣಮೂರ್ತಿ ರವರ ಹೇಳಿಕೆ ಮೇರೆಗೆ ತಯಾರಿಸಿ ಅದಕ್ಕೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಈ ನಿಶಾನೆ ಪಿ -20 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಕಮಲಮ್ಮ ಕೋಂ ಟಿ. ನಾರಾಯಣಮೂರ್ತಿರವರು ಎರಡು ಸಹಿಗಳನ್ನು ಮಾಡಿದ್ದು ಅವುಗಳನ್ನು ನಾನು ಈಗ ನೋಡಿ ಗುರುತಿಸಿದ್ದು ಅವುಗಳನ್ನು **ನಿಶಾನೆ ಪಿ-20(ಎ)** ಹಾಗೂ ನಿಶಾನೆ ಪಿ-20(ಬಿ) ಎಂದು ಗುರುತಿಸಲಾಯಿತು. ನಾನೂ ಸಹ ಸದರಿ ದಾಖಲೆಗೆ ಬಿಕ್ಲಂದಾರ ಎಂದು ಸಹಿ ಮಾಡಿದ್ದು ಅದನ್ನು ಈಗ ನೋಡಿ ಗುರುತಿಸಿದ್ದು ಸದರಿ ನನ್ನ ಸಹಿಯನ್ನು **ನಿಶಾನೆ ಪಿ-20(ಸಿ)**ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ರಾಮನಾಗರಾಜ್ ರವರು ಸಾಕ್ಷಿದಾರನ್ನಾಗಿ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರವಾಗಿ ಶ್ರೀ ಪಿ.ಆರ್ .ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿ೦ ರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್

ಅಸಲು ದಾವೆ ನಂ. 15/2021

ಪಿ.ಡಬ್ಲೂ: 1- ಜಯಪದ್ಮ ಕೋಂ ಎನ್. ಮುರಳೀಕೃಷ

ದಿನಾಂಕಃ 04/12/2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಎಸ್. ಎಸ್. ವಕೀಲರಿಂದ**

ಸಾಕ್ಷಿದಾರರು ಹಾಜರಿದ್ದು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಈ ದಾವೆಯನ್ನು ಡಿಕ್ರಿಗೊಳಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತಾರೆ.

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಶ್ರೀ ಪಿ.ಆರ್ ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್